# ಸುದ್ದಿ ಸಂಚಯ

## ನೆರೆ ಸಂತ್ರಸ್ತರಿಗಾಗಿನ ರಾಮಕೃಷ್ಣ ಮಿಷನ್ನಿನ ಪುನರ್ವಸತಿ ಕಾರ್ಯದ ಶಂಕುಸ್ಥಾಪನೆ

ದಿನಾಂಕ ೦೭. ೦೨. ೨೦೧೦ ರಂದು ರಾಯಚೂರು ಜಿಲ್ಲೆಯ ಸಿಂಧನೂರು ತಾಲೋಕಿನ ಸ್ಥಳಾಂತರಗೊಂಡ ಚಿಂತಮಾನದೊಡ್ಡಿ ಹಾಗೂ ಪುಲಮೇಶ್ವರ ದಿನ್ನಿ ಗ್ರಾಮಗಳಲ್ಲಿನ ಸಂತ್ರಸ್ತರಿಗೆ ಹೊಸಮನೆಗಳ ನಿರ್ಮಾಣದ ಶಂಕುಸ್ಥಾಪನೆಯ ಕಾರ್ಯಕ್ರಮ ನಡೆಯಿತು. ರಾಮಕೃಷ್ಣ ಮಿಷನ್ ಆಶ್ರಮ, ಬೆಳಗಾವಿ ಮತ್ತು ಶ್ರೀರಾಮಕೃಷ್ಣ ಆಶ್ರಮ, ಮೈಸೂರು – ಈ ಸಂಸ್ಥೆಗಳ ಸಂಯುಕ್ತ ಸಹಕಾರದೊಂದಿಗೆ ಈ ಹಳ್ಳಿಗಳಲ್ಲಿ ಒಟ್ಟಾರೆ ೨೨೯ ಮನೆಗಳನ್ನು ಕಟ್ಟಿಕೊಡುವ ಸೇವಾಯೋಜನೆಯನ್ನು ಆರಂಭಿಸಲಾಗಿದೆ. ಶಂಕುಸ್ಥಾಪನೆಯನ್ನು ನೆರವೇರಿಸಿ ಭಾಷಣ ಮಾಡಿದ ಕರ್ನಾಟಕ ರಾಜ್ಯ ಸರ್ಕಾರದ ಲೋಕೋಪಯೋಗಿ ಸಚಿವರಾದ ಮಾನ್ಯ ಶ್ರೀ ಸಿ.ಎಂ. ಉದಾಸಿ ಅವರು, ರಾಮಕೃಷ್ಣ ಮಿಷನ್ ಈ ಪ್ರದೇಶದಲ್ಲಿ ಸುಸಜ್ಜಿತವಾದ ಮನೆಗಳನ್ನು ಕಟ್ಟಿಕೊಡಲು ಮುಂದೆ ಬಂದಿರುವುದನ್ನು ಶ್ಲಾಘಿಸಿದರು. ರಾಮಕೃಷ್ಣ ಮಿಷನ್ ದೇಶಾದ್ಯಂತ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಮಾನವೀಯ ಮೌಲ್ಯಗಳನ್ನು ಜನತೆಗೆ ತಲುಪಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದೆ. ಪ್ರಸ್ತುತ ನೆರೆಸಂತ್ರಸ್ತರಿಗೆ ಪರಿಹಾರ ಕಾರ್ಯಗಳನ್ನು ಹಮ್ಮಿಕೊಳ್ಳುವ ಮೂಲಕ ಸಾಮಾಜಿಕ ಕಾರ್ಯಗಳಲ್ಲಿಯೂ ತೊಡಗಿರುವುದು ಸ್ತುತ್ಯರ್ಹ ಎಂದು ಅವರು ನುಡಿದರು.


ಗ್ರಾಮಸ್ಥರಿಂದ ಅತಿಥಿಗಳಿಗೆ ಸ್ವಾಗತ


ಸಚಿವರಿಂದ ಶಂಕುಸ್ಥಾಪನೆ

ಸಮಾರಂಭದ ದಿವ್ಯಸಾನ್ನಿಧ್ಯ ವಹಿಸಿದ್ದ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಅವರು, "ರಾಮಕೃಷ್ಣ ಮಿಷನ್ನಿನ ಪ್ರಾರಂಭದ ದಿನಗಳಿಂದಲೂ ಪರಿಹಾರ ಕಾರ್ಯ ನಡೆದುಕೊಂಡುಬರುತ್ತಿದೆ. ಶ್ರೀರಾಮಕೃಷ್ಣರೇ ಇದಕ್ಕೆ ಶಂಕುಸ್ಥಾಪನೆ ಮಾಡಿದರೆಂದರೆ ತಪ್ಪಾಗಲಾರದು. ಅವರು ಕಾಶೀಯಾತ್ರೆಗೆ ಹೊರಟಿರುವ ಸಂದರ್ಭದಲ್ಲಿ ಒಂದು ಪ್ರದೇಶದ ಬರಪೀಡಿತ ಪ್ರದೇಶದ ಜನರಿಗೆ, ತಮ್ಮ ಶ್ರೀಮಂತ ಭಕ್ತನ ಮೂಲಕ ಪರಿಹಾರವನ್ನು ನೀಡಿಸಿದ ಮೇಲೆಯೇ ತಮ್ಮ ಯಾತ್ರೆಯನ್ನು ಮುಂದುವರಿಸುತ್ತಾರೆ. ಈ ಪರಂಪರೆ ಈಗಲೂ ಅವ್ಯಾಹತವಾಗಿ ಮುಂದುವರಿಯುತ್ತಿದೆ." ಎಂದು ನುಡಿದರು. ಸ್ವಾಮೀಜಿಯವರು ಮುಂದುವರಿದು, "ಮನೆ ಕಟ್ಟಿಸಿಕೊಡುವ ಈ ಬೃಹತ್ ಕಾರ್ಯವು ಜಿಲ್ಲಾಡಳಿತ ಮತ್ತು ಗ್ರಾಮಸ್ಥರೆಲ್ಲರ ಸಹಕಾರದಿಂದ ಮಾತ್ರ ಸಫಲವಾಗುವಂಥದು. ಆದ್ದರಿಂದ ಸಂಬಂಧಪಟ್ಟ ಎಲ್ಲರ ಸಹಕಾರವನ್ನು ನಾವು ಕೋರುತ್ತೇವೆ. ಇದೇ ಸಂದರ್ಭದಲ್ಲಿ ಗ್ರಾಮಸ್ಥರು ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಹಲವು ಧಾರ್ಮಿಕ ಕಾರ್ಯಕ್ರಮಗಳನ್ನೂ ಹಮ್ಮಿಕೊಂಡು ಉತ್ತಮ ಸಂಸ್ಕಾರವನ್ನು ನೀಡುವ ಕಾರ್ಯವೂ ನಡೆಯಲಿದೆ. ಅದಕ್ಕೆ ಗ್ರಾಮಸ್ಥರ ಪೂರ್ಣ ಸಹಕಾರ ಅವಶ್ಯಕ" ಎಂದರು.

ಮೇಲಿನ ಎರಡು ಗ್ರಾಮಗಳ ಪುನರ್ವಸತಿ ಕಾರ್ಯವು ಆರಂಭಗೊಂಡಿರುವುದು ಗ್ರಾಮಸ್ಥರಲ್ಲಿ ಹರ್ಷವನ್ನು ಮೂಡಿಸಿದೆ. ಹೀಗಾಗಿ ಅವರು ಸ್ವಾಮಿ ನಿತ್ಯಸ್ಥಾನಂದಜಿ ಮತ್ತು ಬೆಳಗಾವಿ ರಾಮಕೃಷ್ಣ ಆಶ್ರಮದ ಸ್ವಾಮಿ ತದ್ಯುಕ್ತಾನಂದಜಿ ಅವರನ್ನು ಆದರ ಮತ್ತು ಸಂಭ್ರಮಗಳಿಂದ ಬರಮಾಡಿಕೊಂಡರು.

ಸಮಾರಂಭದ ಅಧ್ಯಕ್ಷತೆಯನ್ನು ಶಾಸಕರಾದ ವೆಂಕಟರಾವ್ ನಾಡಗೌಡ ಅವರು ವಹಿಸಿದ್ದರು. ಅದಲ್ಲದೆ ಜಿಲ್ಲಾ ಪಂಚಾಯತಿಯ ಪದಾಧಿಕಾರಿಗಳು, ಜಿಲ್ಲಾಧಿಕಾರಿಗಳು ಮೊದಲಾದ ಸ್ಥಳೀಯ ಆಡಳಿತದ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಆಯೋಜನೆಯನ್ನು ಸ್ವಾಮಿ ತದ್ಯುಕ್ತಾನಂದಜಿ ಅವರ ನೇತೃತ್ವದಲ್ಲಿ ಬಂದಿದ್ದ ಬೆಳಗಾವಿ ಆಶ್ರಮದ ಸ್ವಯಂಸೇವಕರು ಮತ್ತು ಸ್ಥಳೀಯ ಸರ್ಕಾರಿ ಆಡಳಿತ ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದ್ದರು. ✶


ಸಾರ್ವಜನಿಕ ಸಮಾರಂಭ

Printed by Swami Nityasthananda and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020 Editor : Swami Vireshananda